ಪ್ರಧಾನ ಮಂತ್ರಿಗಳ ಗ್ರಾಮೀಣ ಸಡಕ್ ಯೋಜನೆ

441(366); ಶ್ರೀ ವೈ ಎಸ್ ವಿ ದತ್ತಾ (ಕಡೂರು)

ಅ) ಕಳೆದ 3 ವರ್ಷಗಳಲ್ಲಿ ಕಡೂರು ವಿಧಾನ ಸಭಾ ಕ್ಷೇತ್ರಕ್ಕೆ ಪ್ರಧಾನ ಮಂತ್ರಿಗಳ ಗ್ರಾಮೀಣ ಸಡಕ್ ಯೋಜನೆಯಡಿಯಲ್ಲಿ ನಿಗದಿಪಡಿಸಿ, ಬಿಡುಗಡೆಯಾಗಿರುವ ಅನುದಾನದ ಮೊತ್ತ ಎಷ್ಟು, (ವರ್ಷವಾರು ವಿವರ ನೀಡುವುದು)

ಆ) ಈ ಅನುದಾನವನ್ನು ಯಾವ ಯಾವ ಕಾಮಗಾರಿಗಳಿಗೆ ವಿನಿಯೋಗಿಸಲಾಗಿದೆ; (ಕಾಮಗಾರಿಗಳವಾರು ವಿವರಗಳನ್ನು ನೀಡುವುದು)

ಇ) ಪ್ರಸಕ್ತ ಸಾಲಿನಲ್ಲಿ ಕಡೂರು ವಿಧಾನ ಸಭಾ ಕ್ಷೇತ್ರದಲ್ಲಿ ಪ್ರಧಾನ ಮಂತ್ರಿ ಗ್ರಾಮೀಣ ಸಡಕ್ ಯೋಜನೆಯಡಿಯಲ್ಲಿ ಸೇರ್ಪಡೆಯಾಗಲು ಶಿಫಾರಸ್ಸು ಆಗಿರುವ ರಸ್ತೆ ಕಾಮಗಾರಿಗಳ ಸಂಖ್ಯೆ ಎಷ್ಟು ಮತ್ತು ಯಾವುವು? (ರಸ್ತೆಯ ಹೆಸರು, ಉದ್ದ, ಅಂದಾಜು ಮೊತ್ತದ ವಿವರಗಳನ್ನು ನೀಡುವುದು)

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಕಳೆದ 3 ವರ್ಷಗಳಲ್ಲಿ ಕಡೂರು ವಿಧಾನ ಸಭಾ ಕ್ಷೇತ್ರಕ್ಕೆ ಪ್ರಧಾನ ಮಂತ್ರಿಗಳ ಗ್ರಾಮೀಣ ಸಡಕ್ ಯೋಜನೆಯಡಿಯಲ್ಲಿ ನಿಗದಿಪಡಿಸಿ, ಬಿಡುಗಡೆಯಾಗಿರುವ ಅನುದಾನದ ವಿವರ ಕೆಳಕಂಡಂತಿದೆ

ಕ್ರ. ಸಂ	ವರ್ಷ	ಬಿಡುಗಡೆಯಾಗಿರುವ ಅನುದಾನ (₹ ಲಕ್ಷಗಳಲ್ಲಿ)
1	2010–11	727.49
2	2011–12	537 74
3	2012–13	466 84

ಆ) ಕಾಮಗಾರಿವಾರು ವಿನಿಯೋಗಿಸಿದ ಅನುದಾನ ವಿವರ ಕೆಳಕಂಡಂತಿದೆ.

ಕ್ರ ಸಂ	ಕಾಮಗಾರಿ ಹೆಸರು	ಭರಿಸಿದ ವೆಚ್ಚ (₹ ಲಕ್ಷಗಳಲ್ಲಿ)
1	ಹೊಸೂರು ಟಿ–04	304 92
2	ಎಸ್ ಕೋಡಿಹಳ್ಳಿ ಟಿ–04	287 52
3	ವಡೇರಹಳ್ಳಿ ಟಿ–07	240 57
4	ಯಲ್ಲಗೊಂಟನಹಳ್ಳಿ ಜಿ ಮಾದಾಪುರ	185.26
5	ಹೊನ್ನೇನಹಳ್ಳಿ ದೇವನೂರು	122 06
6	ನೀಲೇಗೌಡನಕೊಪ್ಪಲು ಟಿ–09	141 63
7	ಚಿಕ್ಕಪಟ್ಟಣಗೆರೆ ಟಿ –05	195.08
8	ಹುಳೇನಹಳ್ಳಿ ಟಿ–04	105 23
9	ಚಿಕ್ ಬಸೂರು ಟಿ–04	149 79

ಇ) ಕಡೂರು ವಿಧಾನ ಸಭಾ ಕ್ಷೇತ್ರಕ್ಕೆ ಪ್ರಸಕ್ತ ಸಾಲಿನಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಹಂತ–2ರಲ್ಲಿ ಕಡೂರು ತಾಲ್ಲೂಕಿನ ಮರವಂಜಿ–ಯಗಟಿ ರಸ್ತೆ ಕಾಮಗಾರಿಯ ಒಟ್ಟು ಉದ್ದ 21 ಕಿಮೀ ಗಳಿಗೆ ಅಂದಾಜು ಮೊತ್ತ ₹ 1079.26 ಲಕ್ಷಗಳಿಗೆ ಸೇರ್ಪಡೆಯಾಗಿದ್ದು, ಅನುಮೋದನೆಗಾಗಿ ಶಿಫಾರಸ್ಸು ಮಾಡಲಾಗಿದೆ

ರಸ್ತೆಗಳ ಅಭಿವೃದ್ಧಿಗೆ ಅನುದಾನ

379(517); ಶ್ರೀ ರಾಜಣ್ಣ ಎಂ (ಶಿಡ್ಲಘಟ್ಟ)

ಅ) ಶಿಡ್ಲಘಟ್ಟ ತಾಲ್ಲೂಕಿನ ವ್ಯಾಪ್ತಿಯಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಕಳೆದ 2 ವರ್ಷಗಳಿಂದ ರಸ್ತೆಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರದ ಮತ್ತು ಕೇಂದ್ರ ಸರ್ಕಾರದ ಯಾವ ಯಾವ ಯೋಜನೆಗಳಿಂದ ಎಷ್ಟು ಹಣ ಬಿಡುಗಡೆ ಮಾಡಿದೆ,

ಆ) ಬಿಡುಗಡೆಯಾಗಿರುವ ಮತ್ತು ವಿನಿಯೋಗಿಸಿರುವ ಮೊತ್ತದಿಂದ ಎಷ್ಟು ಕಿ ಮೀ ರಸ್ತೆಗಳ ನಿರ್ಮಾಣ ಆಗಿದೆ? (ವಿವರ ನೀಡುವುದು)